# ಮನೋವಿಜ್ಞಾನ: ಪ್ರಾಚೀನ ಇತಿಹಾಸ

## ಇಂದಿರಾ ಜೈಪ್ರಕಾಶ್

ಮಾನವ ಇತಿಹಾಸದಲ್ಲಿ ಪ್ರಾಚೀನ ಕಾಲದಿಂದಲೂ ಎಲ್ಲಾ ಸಂಸ್ಕೃತಿಗಳಲ್ಲೂ 'ಮನಸ್ಸು', 'ಆತ್ಮ', 'ಚೇತನ', ಮುಂತಾದವುಗಳ ಬಗ್ಗೆ ಚಿಂತನೆಗಳು ನಡೆದುಕೊಂಡೆ ಬಂದಿವೆ. ಆದರೆ ನಾಗರಿಕತೆಗಳು ಬರೆಯುವುದನ್ನು ಕಲಿತು, ಬರಹಗಳನ್ನು ದಾಖಲೆಗಳಲ್ಲಿ ಸಂಗ್ರಹಿಸಲು ಕಲಿತ ಮೇಲಷ್ಟೇ ನಮಗೆ ಹಿಂದೆ ನಡೆದ ಘಟನೆಗಳ ಸುಳಿವು ದೊರೆಯುವುದು. ಮಾನವ ವರ್ತನೆಯ ಬಗ್ಗೆ ಕುತೂಹಲ ಬಹಳ ಪ್ರಾಚೀನವಾಗಿದ್ದರೂ ನಮಗೆ ಹಿಂದಿನವರಿಗೆ ಇದ್ದಿರಬಹುದಾದ ಮನೋವೈಜ್ಞಾನಿಕ ಜ್ಞಾನದ ಬಗ್ಗೆ ಹೆಚ್ಚು ತಿಳಿದಿಲ್ಲ. ದಾರ್ಶನಿಕರು, ಬುದ್ಧಿಜೀವಿಗಳು ತಮ್ಮ ಸುತ್ತಲಿನ ಪ್ರಪಂಚದ ಅವಲೋಕನ ಮತ್ತು ಅದರ ಬಗ್ಗೆ ಆಲೋಚನೆ ಮಾಡಿರುತ್ತಾರೆ. ಭೂತಕಾಲದ ಗರ್ಭದಲ್ಲಿ ಅದೆಷ್ಟೋ ಅವರ ಆವಿಷ್ಕಾರಗಳು ಅಡಗಿಯೇ ಉಳಿಯುತ್ತವೆ. ಚರಿತ್ರೆಯ ಮಾನಕದಿಂದ ನೋಡಿದರೆ 'ಮನೋವಿಜ್ಞಾನ' ಎನ್ನುವ ಹೆಸರು, ಅಧ್ಯಯನ ಕ್ಷೇತ್ರ ಇನ್ನೂ 'ಹೊಸದು' - ನೂರೈವತ್ತೂ ತುಂಬದ ಮಗು! ಒಂದು ವಿಶಿಷ್ಟ ವಿಜ್ಞಾನವಾಗಿ ಇದು ತನ್ನನ್ನೇ ಗುರುತಿಸಿಕೊಳ್ಳ ತೊಡಗಿದ್ದು 19 ನೆಯ ಶತಮಾನದಲ್ಲಿ. ಹಿಂದಿನ ಅನೇಕ ಶತಮಾನಗಳ ಘಟನೆಗಳು ಮತ್ತು ವ್ಯಕ್ತಿಗಳ ಬಗ್ಗೆ ನಿಖರವಾಗಿ ತಿಳಿಯಲು ಸಾಧ್ಯವಿಲ್ಲ.

ಇನ್ನು ಮನೋವಿಜ್ಞಾನಿಗಳ ಚರಿತ್ರೆ ಬರೆಯುವವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಶತಮಾನ, ದಶಕಗಳ ಹಿಂದೆ ಒಂದು ಘಟನೆ, ಪ್ರಯೋಗ, ಸಂಶೋಧನೆ ನಡೆದಿರುತ್ತದೆ. ಆ ವೇಳೆ ಒಬ್ಬ ವ್ಯಕ್ತಿ ಮಾಡಿರಬಹುದಾದ ಸಾಧನೆಗಳನ್ನು ದಾಖಲಿಸುವ ಪ್ರಯತ್ನ ಅಥವಾ ರೂಢಿ ಇಲ್ಲದಿದ್ದಿರಬಹುದು. ಕೆಲವು ವೇಳೆ ದಾಖಲೆಗಳು ನಷ್ಟವಾಗಿರಬಹದು. ಜಾನ್ ಬಿ. ವಾಟ್ಸನ್ (John B. Watson) ಎಂಬ ಪ್ರಸಿದ್ಧ ಮನೋವಿಜ್ಞಾನಿ ತನ್ನ ಇಳಿವಯಸ್ಸಿನಲ್ಲಿ ತನ್ನ ಹಸ್ತಪ್ರತಿಗಳು, ಸಂಶೋಧನಾ ಟಿಪ್ಪಣಿಗಳು, ಪತ್ರಗಳು ಎಲ್ಲವನ್ನೂ ಬೆಂಕಿಗೆ ಹಾಕಿ ಸುಟ್ಟುಬಿಟ್ಟಿದ್ದನಂತೆ. ಹೀಗಾಗಿ ಅವನ ಜೀವನದ ಬಗ್ಗೆ ಅಮೂಲ್ಯ ಮಾಹಿತಿ ನಾಶವಾಗಿತ್ತು. ಎಬ್ಬಿಂಗೌಸ್ (Ebbinghaus), ಮತ್ತು ಫೆಕ್ನರ್ (Fechner) ಎಂಬ 19ನೆಯ ಶತಮಾನದ ಮನೋಭೌತಿಕ ವಿಜ್ಞಾನಿಗಳ ಟಿಪ್ಪಣಿಗಳು ಕಳೆದುಹೋಗಿದ್ದು ದಶಕಗಳ ನಂತರ ಪತ್ತೆಯಾಗಿದ್ದವಂತೆ. ಚರಿತ್ರಕಾರರೇ ಸತ್ಯವನ್ನು ತಿರುಚಿರುವುದೂ ಉಂಟು. ಫ್ರಾಯ್ಡ್ (Freud), ಯೂಂಗ್ (Jung), ಕ್ಹೊಲರ್ (Kohler) ಮುಂತಾದವರ ಜೀವನಚರಿತ್ರೆ ಬರೆದ ಅವರ ಅಭಿಮಾನಿಗಳು ಇವರ ಪ್ರತಿಷ್ಠೆಯನ್ನು ಮಂಕುಮಾಡುವಂತಹ ವಿಷಯಗಳನ್ನು ಅದುಮಿಟ್ಟಿದ್ದು ನಂತರ ಬಯಲಾಗಿತ್ತು. ಆತ್ಮಕಥನ ಬರೆದುಕೊಳ್ಳುವವರು ತಮ್ಮ ನಿಲುವನ್ನು ಸಮರ್ಥಿಸಿಕೊಂಡು ಅರೆಸತ್ಯ ಬಿಚ್ಚಿಡುವುದೂ ಸಾಮಾನ್ಯ. ಹಿಂದೆ ಮಹಿಳೆಯರು, ವರ್ಣೀಯರು, ಯುರೋಪಿಯನ್ ಅಲ್ಲದವರ ಸಂಶೋಧನೆ, ಕೊಡುಗೆ

ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದವು. ಇನ್ನು ಬೇರೆ ಭಾಷೆಯಲ್ಲಿರುವ ಮಾಹಿತಿ ತರ್ಜುಮೆಯಾಗುವಾಗ ಮೂಲ ರೂಪ ಕಳೆದುಕೊಳ್ಳುವುದು ಸಾಧ್ಯ. ಹೀಗಾಗಿ ಅನೇಕ ಮೂಲಗಳಿಂದ ವಿಷಯ ಸಂಗ್ರಹಿಸಿ ಅವನ್ನು ಹೋಲಿಸಿ ಸತ್ಯಕ್ಕೆ ಸಮೀಪವಾದದ್ದು ಎನಿಸಿದ್ದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಪ್ರಾಚೀನರು ಎಲ್ಲಾ ಪ್ರಾಕೃತಿಕ, ದೈಹಿಕ ಮತ್ತು ಮಾನಸಿಕ ಕ್ರಿಯೆಗಳಿಗೆ ಪ್ರೇತಗಳು, ದೇವತೆಗಳು ಮುಂತಾದ ಅತಿಮಾನುಷ ಮೂಲಗಳೇ ಕಾರಣ ಎಂದು ತಿಳಿಯುತ್ತಿದ್ದರು. ಇಂತಹ ಕಾಲದಲ್ಲೂ ಈಜಿಪ್ಟಿನ ಒಂದನೆಯ ಸಾಮೆಟಿಕಸ್ (Psammetichus I) ಎಂಬ ರಾಜ ಕ್ರಿಸ್ತ ಪೂರ್ವ 7ನೆಯ ಶತಮಾನದಲ್ಲೇ 'ಮನೋಪ್ರಯೋಗ' ಮಾಡಿದ್ದನಂತೆ. ಶೈಶವದಲ್ಲಿ ಭಾಷೆ ಬೆಳೆಯುವುದನ್ನು ಅಧ್ಯಯನ ಮಾಡಿ ಈಜಿಪ್ಷಿಯನ್ನರ ಕುಲ 'ಅತ್ಯುತ್ತಮ' ವೆಂದು ಸಾಧಿಸಲು ಅವನು ಮಾಡಿದ ಪ್ರಯತ್ನ ವಿಫಲವಾಯಿತು. ಆದರೆ ಸುಮಾರು 2700 ವರ್ಷಗಳ ಹಿಂದೆಯೇ ಒಬ್ಬಾತನಿಗೆ ಮಾನಸಿಕ ಸಾಮರ್ಥ್ಯಗಳನ್ನು ಆಧ್ಯಯನ ಮಾಡಬಹುದು ಎಂಬ ವಿಚಾರ ಹೊಳೆದಿತ್ತು ಎನ್ನುವುದು ಮಹತ್ವದ ವಿಷಯ.



ಪ್ಲೇಟೋ, ಅರಿಸ್ಟಾಟಲ್

ಹಂಟ್ ಎಂಬ ಮನೋಚರಿತ್ರಕಾರನ ಪ್ರಕಾರ ಕ್ರಿಸ್ತ ಪೂರ್ವ 6ನೆಯ ಶತಮಾನದಲ್ಲಿ ಬೇರೆ ಬೇರೆಯಾಗಿ ಆದರೆ ಒಂದೇಸಮಯದಲ್ಲಿ 'ಮನಸ್ಸಿನ ಪರಿಶೋಧನೆ' ಆಯಿತಂತೆ. ಭಾರತದಲ್ಲಿ ಗೌತಮ ಬುದ್ಧ ಸಂವೇದನೆಗಳು ಮತ್ತು ಪ್ರತ್ಯಕ್ಷಣಗಳು ನಿಧಾನವಾಗಿ ಸಂಯೋಜನೆಗೊಂಡು ಆಲೋಚನೆ ಮತ್ತು ವಿಚಾರಗಳಾಗಿ ಬದಲಾಗುತ್ತವೆ ಎಂದು ಬೋಧಿಸಿದ್ದ. ಅದೇ ಕಾಲದಲ್ಲಿ ಚೀನಾದಲ್ಲಿ ಕನ್ಫ್ಯೂಶಿಯಸ್ ಪ್ರತಿಯೊಬ್ಬ ವ್ಯಕ್ತಿಗೂ ಆಲೋಚಿಸುವ ಮತ್ತು ನಿರ್ಧರಿಸುವ ಸಾಮರ್ಥ್ಯ ಇರುತ್ತದೆ ಎಂದು ವಾದಿಸಿದ್ದ. ಆದರೆ ಇಂತಹ ಚಿಂತನೆಗಳಿಗೆ ಸ್ಪಷ್ಟ ರೂಪ ಕೊಟ್ಟವರು ಪ್ರಾಚೀನ ಗ್ರೀಕರು. ಸಫೋ (Sappho) ಎಂಬ ಕವಿ, ಸೊಲನ್ (Solon) ಎಂಬ ಶಾಸಕ, ಥೇಲ್ಸ್ (Thales) ಎಂಬ ಅನೇಕ ಚಿಂತಕರಿಂದ ಗ್ರೀಸಿನಲ್ಲಿ ಬೌದ್ಧಿಕ ಪ್ರಗತಿ ವೇಗವಾಯಿತು. ಇದರ ಫಲವಾಗಿ 'ದರ್ಶನ ಶಾಸ್ತ್ರ' ಎಂಬ ಜ್ಞಾನದ ಹೊಸ ಕ್ಷೇತ್ರ ಉಗಮವಾಯಿತು. ಈ ತತ್ವಶಾಸ್ತ್ರ ಅಥವಾ ದರ್ಶನ ಶಾಸ್ತ್ರದ ಒಂದು ಅಂಗವಾಗಿ ಮನಃಶಾಸ್ತ್ರ ನಿಧಾನವಾಗಿ ಬೆಳೆಯಿತು. ಗ್ರೀಸ್, ಜರ್ಮನಿ, ಬ್ರಿಟನ್ ಮುಂತಾದ ದೇಶಗಳಲ್ಲಿ ಮಾನವನ ಬಗ್ಗೆ ವಿವಿಧ ವಿಚಾರಗಳು ಪ್ರಚಲಿತವಾಗಿದ್ದನ್ನು ನೋಡಬಹುದು.

ಗ್ರೀಸಿನ ದಾರ್ಶನಿಕರು ದೇಹ ಬೇರೆ ಮನಸ್ಸು ಬೇರೆ ಎಂದಿದೆಯೇ? ಆತ್ಮ, ಚೇತನ, ಪ್ರಾಣ ಎಂದರೇನು? ಆತ್ಮ ದೇಹದಲ್ಲಿ ಎಲ್ಲಿರುತ್ತದೆ? ಅದನ್ನು ದೇಹದೊಡನೆ ಜೋಡಿಸುವುದು ಯಾವುದು? ಮಾನವರನ್ನು ನಿಯಂತ್ರಿಸುವ ಒಳಗಿನ ಶಕ್ತಿ ಯಾವುದು? ನಮಗೆ ಹೊರ ಪ್ರಪಂಚದ ಅರಿವು ಹೇಗೆ ಉಂಟಾಗುತ್ತದೆ? ಇವೇ ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕಲು

ಪ್ರಯತ್ನಿಸಿದರು. ಹಿಪಾಕ್ರಟೀಸ್ (Hippocrates) (460-377 ಕ್ರಿ.ಪೂ) ವೈದ್ಯಕೀಯದ ಜನಕ ಎನಿಸಿಕೊಂಡವನು. ಕಾಯಿಲೆಗಳಿಗೆ ದೆವ್ವ, ರಾಕ್ಷಸ, ಪ್ರೇತಗಳು ಕಾರಣವಲ್ಲ, ದೈಹಿಕ ಅಸ್ವವ್ಯಸ್ಥತೆ ಎಂದು ಅಂದಿನ ನಂಬಿಕೆಗಳನ್ನು ವಿರೋಧಿಸಿದ. ಮನಸ್ಸು ಮಿದುಳಿನಲ್ಲಿದೆ, ದೇಹ ಭೌತಿಕ ದ್ರವ್ಯಗಳಿಂದ ಮಾಡಲ್ಪಟ್ಟಿದೆ, ಆದರೆ ಮನಸ್ಸು ಅತೀಂದ್ರಿಯವಾದದ್ದು ಎಂದು ಹೀಗೆ ಮನಸ್ಸು (ಅಥವಾ ಆತ್ಮ) ದೇಹದಿಂದ ಬೇರೆ ಎಂಬ ದ್ವೈತ ವಾದವನ್ನು ಪ್ರತಿಪಾದಿಸಿದ್ದ. ಇವನ ಸಮಕಾಲೀನನಾಗಿದ್ದ ಪ್ಲೇಟೋ (Plato) ಆತ್ಮ ಮಿದುಳಿನಲ್ಲಿದೆ ಎಂದರೆ, ಅರಿಸ್ಟಾಟಲ್ (Aristotle)ಅದು ಹೃದಯದಲ್ಲಿದೆ ಎಂದು ವಾದಿಸಿದ್ದ. ಅರಿಸ್ಟಾಟಲ್ ಮನಸ್ಸು ದೇಹದಿಂದ ಬೇರೆಯಾಗಿರಲು ಸಾಧ್ಯವಿಲ್ಲ, ದೈಹಿಕ ಕ್ರಿಯೆಗಳಿಂದ ಉತ್ಪನ್ನವಾಗುವ ವಸ್ತು ಮನಸ್ಸು ಎಂದು ಅದ್ವೈತ ವಾದವನ್ನು ಮಂಡಿಸಿದ್ದ. ಇಂತಹ ವಿಚಾರಗಳು ಮುಂದೆ ಇತರ ದೇಶಗಳ ವಿಚಾರವಾದಿಗಳನ್ನು ಪ್ರೇರೇಪಿಸಿದವು.

ನವೋದಯ ಕಾಲದಲ್ಲಿ (1300-1600 ಕ್ರಿ.ಶ) ಯೂರೋಪ್‌ನಲ್ಲಿ ಫ್ರಾನ್ಸಿಸ್ ಬೇಕನ್(Francis Bacon)ನಂತಹ ಚಿಂತಕರು ಮಾನವನ ಅಧ್ಯಯನ ಅನುಭವಜನ್ಯವಾಗಿರಬೇಕು ಕೇವಲ ಸಿದ್ಧಾಂತಗಳನ್ನು ಆಧರಿಸಿರಬಾರದು ಎಂಬ ವಿಚಾರವನ್ನು ಮುಂದಿಟ್ಟ. 16ನೆಯ ಶತಮಾನದಲ್ಲಿ ರೆನೆ ಡೆಕಾರ್ಟ್ (Rene Descartes) ಎಂಬ ಫ್ರೆಂಚ್ ಗಣಿತಜ್ಞ ಪ್ಲೇಟೋನ ವಿಚಾರಗಳಿಗೆ ಮರುಜೀವ ನೀಡಿ ಮನುಷ್ಯರನ್ನು ಪ್ರಾಣಿಗಳಿಂದ ಬೇರ್ಪಡಿಸುವುದು ಅಭೌತಿಕವಾದ ಮನಸ್ಸು, ಪೀನಿಯಲ್ ಗ್ಲಾಂಡ್ ಎನ್ನುವ ಮಿದುಳಿನ ಕಿರಿದಾದ ಅಂಗದ ಮೂಲಕ ದೇಹ-ಮನಸ್ಸುಗಳ ನಡುವೆ ಸಂಪರ್ಕ ಏರ್ಪಡುತ್ತದೆ, ಮನಸ್ಸು ದೇಹಕ್ಕಿಂತ ಶ್ರೇಷ್ಠ ಮತ್ತು ಅದು ದೇಹದೊಡನೆ ಅಂತರಕ್ರಿಯೆ ನಡೆಸುತ್ತದೆ ಎಂದು 'ಮೆಂಟಲಿಸ್ಟಿಕ್ (mentalistic)' ಮತ್ತು 'ಇಂಟರಾಕ್ಶನಿಸ್ಟ್ (interactionist) ' ಎಂಬ ಎರಡು ವಿಚಾರಧಾರೆ ಯನ್ನು ಮಂಡಿಸಿದ. 17ನೆಯ ಶತಮಾನದಲ್ಲಿ ಥಾಮಸ್ ಹಾಬ್ಸ್ (Thomas Hobbes) ಮತ್ತು ಜಾನ್ ಲಾಕ್ (John Locke) ಎಂಬ ಇಂಗ್ಲಿಷ್ ದಾರ್ಶನಿಕರು ಇವನ ವಿಚಾರಗಳನ್ನು ವಿರೋಧಿಸಿದರು. ಲಾಕ್ ಮನಸ್ಸು ಒಂದು ಬರಿದಾದ ಕಪ್ಪುಹಲಗೆಯಂತಿದ್ದು ಅನುಭವದಿಂದ ಜ್ಞಾನ ಸಂಗ್ರಹವಾಗುತ್ತದೆ ಎಂದಿದ್ದ. ಜೇಮ್ಸ್ ಮಿಲ್ (James Mill) (1773-1836) ಮನಸ್ಸು ಒಂದು ಯಂತ್ರದಂತೆ, ಅದು ಶಾರೀರಿಕ ಯಂತ್ರದ ಒಂದು ಭಾಗ ಎಂದು 'ಸರಳೀಕರಣ ರೂಪ (reductionist)' ದ ವಾದವನ್ನು ಮುಂದಿಟ್ಟ. ಮನಸ್ಸಿನ ರಚನೆ ಮತ್ತು ಕಾರ್ಯದ ಬಗ್ಗೆ ಇಂತಹ ವಾದಗಳನ್ನು ಒಟ್ಟುಗೂಡಿಸಿದವನು ಎಮಾನ್ಯುಯಲ್ ಕ್ಯಾಂಟ್ (Emmanuel Kant) (1724-1804) ಎಂಬ ಜರ್ಮನ್ ದಾರ್ಶನಿಕ.

ಇದೇ ಸಮಯದಲ್ಲಿ ಜರ್ಮನಿಯಲ್ಲಿ ಫ್ರಾಂಝ್ ಜೋಸೆಫ್ ಗಾಲ್ (Franz Josef Gall) ಮಿದುಳನ್ನು ಕತ್ತರಿಸಿ ಅದರ ಭಾಗಗಳನ್ನು ಪರೀಕ್ಷಿಸಿ ಕಪಾಲಶಾಸ್ತ್ರ ಹುಟ್ಟುಹಾಕಿದ. ಜರ್ಮನಿಯ ಫ್ರೆಡ್ರಿಕ್ ಬೆಸೆಲ್ (Friedrich Bessel) ಎಂಬ ಖಗೋಳ ಶಾಸ್ತ್ರಜ್ಞ ಮಾಪನಮಾಡುವಲ್ಲಿ ಜನರ ನಡುವೆ ಅವರು ನಿಯಂತ್ರಿಸಲಾಗದ ವ್ಯತ್ಯಾಸಗಳಿರುತ್ತವೆ

ಎಂದು ಕಂಡುಹಿಡಿದಿದ್ದ. ಡಾರ್ವಿನ್‌ನ ವಾದವೂ ಆ ವೇಳೆಗೆ ಅನೇಕ ದೇಶಗಳಲ್ಲಿ ಹರಡಿತ್ತು. ಈ ವೇಳೆಗೆ ವೆಬರ್ (Weber), ಫೆಕ್ನರ್(Fechner), ಹೆಲ್ಮ್‌ಹೋಲ್ಟ್ಜ್(Helmholtz) ಮುಂತಾದವರು ಜರ್ಮನಿಯಲ್ಲಿ ಮನೋಭೌತಿಕ ಪ್ರಯೋಗಗಳನ್ನು ಪ್ರಚಲಿತಗೊಳಿಸಿದ್ದರು. ಸಂವೇದನೆ ಮುಂತಾದ 'ಮಾನಸಿಕ' ಪ್ರಕ್ರಿಯೆಗಳನ್ನು ಪ್ರಾಯೋಗಿಕ ವಿಧಾನಗಳಿಂದ ಅಳೆಯುವ ರೀತಿ ಪ್ರಾರಂಭವಾಯಿತು. ಇಂತಹ ಅನೇಕ ಪ್ರಭಾವಗಳ ಫಲವಾಗಿ ವೂನ್ಟ್ 1879 ರಲ್ಲಿ ಪ್ರಥಮ ಪ್ರಯೋಗಶಾಲೆಯನ್ನು ಲೈಪ್ಜಿಗ್ ನಲ್ಲಿ ಸ್ಥಾಪಿಸಿದ. ಇದನ್ನು ಆಧುನಿಕ ಮನೋವಿಜ್ಞಾನದ ಪ್ರಾರಂಭ ಎನ್ನಲಾಗಿದೆ.

ಇಂದು ಬಳಕೆಯಲ್ಲಿರುವ 'ಸೈಕಾಲಜಿ' ಎನ್ನುವ ಆಂಗ್ಲ ಪದಕ್ಕೂ ಒಂದು ಐತಿಹ್ಯ ಇದೆ. ಗ್ರೀಕ್ ಪುರಾಣಗಳ ಪ್ರಕಾರ ಸೈಕಿ (Psyche) ಅತ್ಯಂತ ರೂಪವತಿಯಾದ ರಾಜಕುಮಾರಿ. ಎರೋಸ್ (ಮನ್ಮಥ) ಇವಳನ್ನು ಮೋಹಿಸಿದ. ಇದರಿಂದ ಸೈಕಿ ವೀನಸ್‌ಳ ಮತ್ಸರಕ್ಕೆ ಪಾತ್ರಳಾದಳು. ವೀನಸ್‌ಳಿಂದ ಅನೇಕ ಕಷ್ಟಗಳನ್ನು ಅನುಭವಿಸಿದ ಸೈಕಿಗೆ ಜ್ಯೂಪಿಟರ್ ಅಮರತ್ವ ನೀಡಿ ಎರೋಸ್‌ಗೆ ವಿವಾಹ ಮಾಡಿಸುತ್ತಾನೆ ಎಂಬ ಕಥೆಯಿದೆ. ಗ್ರೀಕ್ ಮೂಲದ 'ಸೈಕಿ' ಎಂದರೆ ಉಸಿರು, ಪ್ರಾಣ, ಆತ್ಮ ಎಂಬ ಅರ್ಥಗಳಿವೆ. 'ಲೋಗೋಸ್ (logos)' ಎಂದರೆ ಭಾಷೆ, ಪದ, ತರ್ಕ ಎಂದರ್ಥ. ಲ್ಯಾಟಿನ್ ಭಾಷೆಯಲ್ಲಿ ಈ ಎರಡೂ ಪದಗಳನ್ನು ಸೇರಿಸಿ 'ಸೈಕಾಲಜಿ (psychology)', ಅಂದರೆ ಮನಸ್ಸಿನ ಅಥವಾ ಆತ್ಮದ ಅಧ್ಯಯನ ಎಂದಾಯಿತು. ಈ ಪದವನ್ನು ಮೊದಲು ಯಾರು ಉಪಯೋಗಿಸಿದರು ಎಂಬ ಬಗ್ಗೆ ಅನೇಕ ವಿವಾದಗಳಿವೆ. ಕ್ರೊಯೇಷಿಯಾದ ಮಾರ್ಕೊ ಮರುಲೆಕ್ (Marko Marulic) 16ನೆಯ ಶತಮಾನದಲ್ಲಿ ತನ್ನ ಲ್ಯಾಟಿನ್ ಕೃತಿಯಲ್ಲಿ ಈ ಪದ ಬಳಸಿದ್ದ. ಆದರೆ ಕ್ರಿಶ್ಚಿಯನ್ ವುಲ್ಫ್ (Christian Wolff) ಎಂಬ ಜರ್ಮನ್ ದಾರ್ಶನಿಕ ಬರೆದ ಗ್ರಂಥಗಳಿಂದ ಈ ಪದ ಜನಜನಿತವಾಯಿತು ಎನ್ನಲಾಗಿದೆ. 19ನೆಯ ಶತಮಾನದ ಮಧ್ಯಭಾಗದಲ್ಲಿ ಸೈಕಾಲಜಿ ಎನ್ನುವ ಪದ 'ಮೆಂಟಲ್ ಫಿಲಾಸಫಿ (mental philosophy)' ಎನ್ನುವ ಪದದ ಬದಲು ಬಳಕೆಗೆ ಬಂದಿತು. ಇದು ತತ್ವಶಾಸ್ತ್ರದಿಂದ ಮನೋವಿಜ್ಞಾನದ ಬೇರ್ಪಡಿಕೆಯ ಸಂಕೇತ ಎನ್ನಬಹುದು. ಹೀಗೆ ಅನೇಕ ಜನರ, ಅನೇಕ ಕಲ್ಪನೆಗಳ, ಅನೇಕ ಪ್ರಯೋಗಗಳ ಫಲವಾಗಿ ಮಾನವ ವರ್ತನೆಯನ್ನು ಕೇಂದ್ರವಾಗಿಟ್ಟುಕೊಂಡ ಅಧ್ಯಯನ ಕ್ಷೇತ್ರವಾಗಿ ಮನೋವಿಜ್ಞಾನ ಬೆಳೆಯಿತು.